ಪಾನೀಯ ನಿಗಮ ನಿಯಮಿತಕ್ಕೆ ಸಂಬಂಧಿಸಿದ 123ನೇ ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು: ವರದಿಯನ್ನು ಮಂಡಿಸಲಾಯಿತು.

3. ಅ) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ: ದಿನಾಂಕ 13.02.2011ರಂದು ಮಹದೇಶ್ವರ ಬೆಟ್ಟದಲ್ಲಿ ಅಗ್ನಿದುರಂತ ಸಂಭವಿಸಿ ಸುಮಾರು 42 ಅಂಗಡಿಗಳು ಸುಟ್ಟು ಹೋಗಿ 80–85 ಲಕ್ಷ ರೂಪಾಯಿಗಳು ನಷ್ಟವಾಗಿದ್ದು ಅವರಿಗೆ ಪುನರ್ ವಸತಿ ಕಲ್ಪಿಸುವ ಬಗ್ಗೆ.

ಶ್ರೀ ಆರ್. ನರೇಂದ್ರ (ಹನೂರು): ಮಾನ್ಯ ಅಧ್ಯಕ್ಷರೆ, ಕಳೆದ ತಿಂಗಳು 13.2.2011ರಂದು ಮಹದೇಶ್ವರ ಬೆಟ್ಟದಲ್ಲಿ ಅಗ್ನಿ ದುರಂತ ಸಂಭವಿಸಿ ಸುಮಾರು 42 ಅಂಗಡಿಗಳು ಸುಟ್ಟು ಹೋಗಿವೆ. ಸುಮಾರು 80–85 ಲಕ್ಷ ರೂ.ಗಳು ಲಾಸ್ ಆಗಿದೆ. ಒಂದು ನೋವಿನ ಸಂಗತಿ ಏನೆಂದರೆ, 42 ಅಂಗಡಿಗಳು ಅಗ್ನಿ ದುರಂತ ಆಗಿ ಅವರ ಕುಟುಂಬದವರು ಬೀದಿಯಲ್ಲಿ ಕುಳಿತಾಗ ಜಿಲ್ಲಾಡಳಿತದವರು ಒಬ್ಬರೂ ಬಂದು ಅವರಿಗೆ ಬೇಕಾದ ಮೂಲಭೂತ ಸೌಕರ್ಯಗಳಾದ ಬಟ್ಟೆ–ಬರೆ ಅಥವಾ 4 ದಿವಸ ಊಟಕ್ಕೆ ಏನು ನೋಡಲಿಲ್ಲ. ಅವರು ಬಹಳ ಕಷ್ಟದಲ್ಲಿದ್ದಾರೆ. ಆ 42 ಅಂಗಡಿಗಳವರು 80–85 ಲಕ್ಷ ರೂ.ಗಳನ್ನು ಕಳೆದುಕೊಂಡಿದ್ದಾರೆ. ಅವರಿಗೆ ಪುನರ್ ವಸತಿ ಕಲ್ಪಿಸಿಕೊಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾನು ವರದಿಯನ್ನು ಜಿಲ್ಲಾಧಿಕಾರಿಗಳಿಂದ ತರಿಸಿಕೊಂಡಿರುತ್ತೇನೆ. ಕೊಳ್ಳೆಗಾಲ ತಾಲ್ಲೂಕು ರಾಂಪುರ ಹೋಬಳಿ ಮಹದೇಶ್ವರ ಬೆಟ್ಟಕ್ಕೆ ಸೇರಿದಂಥ 42 ಅಂಗಡಿಗಳಿಗೆ ದಿನಾಂಕ: 13.2.2011ರಂದು ಆಕಸ್ಮಿಕವಾಗಿ ಅಗ್ನಿ ದುರಂತದಿಂದ ನಾಶವಾಗಿದೆ. ಪರಿಹಾರವನ್ನು ಕೇಳಿದ್ದಾರೆ. ಈ ರೀತಿ ಬೆಂಕಿ ಆಕಸ್ಮಿಕವಾಗಿ ಬಿದ್ದಾಗ ಪರಿಹಾರ ಕೊಡುವಂಥದ್ದು ಸಾಮಾನ್ಯವಾಗಿ ಇಲ್ಲ. ಆದರೆ ಇದು ವಿಶೇಷವಾದ ಸಂದರ್ಭವೆಂದು ಪರಿಗಣಿಸಿ ಈ 42 ಜನರಿಗೆ ತಕ್ಷಣ ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟು ಒಬ್ಬೊಬ್ಬರಿಗೆ 25,000 ರೂ.ಗಳನ್ನು ತಕ್ಷಣ ತಾತ್ಕಾಲಿಕವಾಗಿ ಪರಿಹಾರ ಕೊಡಬೇಕೆಂದು ಸೂಚನೆ ಕೊಟ್ಟು ಹಣವನ್ನು ತಲುಪಿಸುತ್ತೇನೆ.

ಆ) ವಿಷಯ: ಮೂಡಿಗೆರೆ ತಾಲ್ಲೂಕಿನಲ್ಲಿ ಬರುವ ಜಮೀನುಗಳನ್ನು ಅರಣ್ಯ ಇಲಾಖೆ ಮತ್ತು ಗೋಮಾಳ ಜಮೀನುಗಳನ್ನು ಡೀಮ್ಡ್ ಫಾರೆಸ್ಟ್ ಎಂದು ಹೇಳಿ ತೀರ್ಮಾನ ಮಾಡಿರುವುದು ಹಾಗೂ ಕೆಲವು ಜಮೀನುಗಳಿಗೆ ಹಕ್ಕು

ಪತ್ರಗಳಿದ್ದರೂ ಸಹ ಅದನ್ನು ಡೀಮ್ಡ್ ಫಾರೆಸ್ಟ್ ಎಂದು ಹೇಳಿ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿರುವ ಬಗ್ಗೆ.

ಶ್ರೀ ಎಂ.ಪಿ. ಕುಮಾರಸ್ವಾಮಿ (ಮೂಡಿಗೆರೆ): ಮಾನ್ಯ ಅಧ್ಯಕ್ಷರೆ, ನಮ್ಮ ಮೂಡಿಗೆರೆ ತಾಲ್ಲೂಕಿನಲ್ಲಿ ಬರುವ ಜಮೀನುಗಳನ್ನು ಅರಣ್ಯ ಇಲಾಖೆ ಮತ್ತು ಗೋಮಾಳ ಜಮೀನುಗಳನ್ನು ಇವತ್ತು ಡೀಮ್ಡ್ ಫಾರೆಸ್ಟ್ ಎಂದು ಹೇಳಿ ತೀರ್ಮಾನ ಮಾಡಿದ್ದಾರೆ. ಕೆಲವೊಂದಕ್ಕೆ ಹಕ್ಕುಪತ್ರಗಳು ಇದ್ದರೂ ಕೂಡ ಅದನ್ನು ಡೀಮ್ಡ್ ಫಾರೆಸ್ಟ್ ಎಂದು ಹೇಳಿ ಅಧಿಕಾರಿಗಳು ನಿರ್ಲಕ್ಷ್ಯವಹಿಸಿ ಮಾಡಿಕೊಂಡಿದ್ದಾರೆ. ನಮ್ಮಲ್ಲಿರುವ ಶೇಕಡಾ 50 ಪಂಚಾಯಿತಿಗಳಿಗೆ ಇವತ್ತು ಯಾವುದೇ ನಿವೇಶನ ಕೊಡುವುದಕ್ಕೆ ಆಗುತ್ತಿಲ್ಲ. ಎಲ್ಲಾ ಕಡೆ ಡೀಮ್ಡ್ ಫಾರೆಸ್ಟ್ ಎಂದು ಹೇಳುತ್ತಿದ್ದಾರೆ. ಆದರೆ ಕಂದಾಯ ಇಲಾಖೆಯ ಅನುಮತಿ ಇಲ್ಲದೆ ಅದು ಹೇಗೆ ಡೀಮ್ಡ್ ಫಾರೆಸ್ಟ್ ಆಯಿತು. ಆದ್ದರಿಂದ ಸರ್ಕಾರದಿಂದ ಮನೆ ಕಟ್ಟಿಕೊಡುವುದಕ್ಕೆ ಇದರಿಂದ ಬಹಳ ತೊಂದರೆಯಾಗುತ್ತಿದೆ. ಈ ವರ್ಷ ನಮಗೆ ಶೇಕಡಾ 50ರಷ್ಟು ಮನೆ ಕಟ್ಟುವುದಕ್ಕಾಗುವುದಿಲ್ಲ. ಏಕೆಂದರೆ, ನಿವೇಶನದ ಕೊರತೆ ಉಂಟಾಗುತ್ತದೆ. ಈ ಬಗ್ಗೆ ನಾನು ಶೂನ್ಯ ವೇಳೆಯಲ್ಲಿ ಸಂಬಂಧಪಟ್ಟ ಕಂದಾಯ ಮಂತ್ರಿಗಳಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಕಂದಾಯ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಡೀಮ್ಡ್ ಫಾರೆಸ್ಟ್ ಕುರಿತು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ. ಮಾನ್ಯ ಕಂದಾಯ ಸಚಿವರ ಗಮನಕ್ಕೆ ಇದನ್ನು ತಂದು ವಿವರಗಳನ್ನು ತರಿಸಿ ಒಂದು ವರದಿ ಕೊಡಿಸುತ್ತೇನೆ.

ಅಧ್ಯಕ್ಷರು: ಇದು ಬಹಳ important.

ಶ್ರೀ ಪಿ.ಎಂ. ಅಶೋಕ: ಮಾನ್ಯ ಅಧ್ಯಕ್ಷರೆ, ಎಲ್ಲಾ ಕಡೆ ಸರ್ಕಾರದಿಂದ ಡೀಮ್ಡ್ ಫಾರೆಸ್ಟ್ ಎಂದು ಆದೇಶವನ್ನು ಹೊರಡಿಸುತ್ತಿದ್ದಾರೆ. Revenue Department and Forest Department ಗೆ Co-ordination ಇಲ್ಲ. ನಾವು ಬೇಕಾದಷ್ಟು ಸಲ ಹೇಳಿದ್ದೇವೆ. ಅವರು Co-ordination ಮಾಡಿಕೊಂಡು ಮಾಡಿದರೆ ಒಳ್ಳೆಯದು. ಅಲ್ಲಿ ಈಗ ಬಡವರು ಮನೆಯನ್ನು ಕಟ್ಟಿಕೊಂಡಿದ್ದಾರೆ. ಫಾರೆಸ್ಟ್ ಡಿಪಾರ್ಟ್‌ಮೆಂಟ್‌ರವರು ಈಗ ಬಂದು ಡೀಮ್ಡ್ ಫಾರೆಸ್ಟ್ ಎಂದು ಹೇಳಿದರೆ ಬಹಳ ಕಷ್ಟವಾಗುತ್ತದೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್: ಕೊಡಗು ಜಿಲ್ಲೆಯಲ್ಲಿ ಕೂಡ ಇದೆ ದೊಡ್ಡ ಪ್ರಾಬ್ಲಮ್ ಇದೆ.

ಶ್ರೀ ಕೆ.ಜಿ. ಕುಮಾರಸ್ವಾಮಿ: ಮಲೆನಾಡು ಭಾಗದಲ್ಲಿ ಸುಮಾರು ಕಡೆ ಮನೆಯನ್ನು ಕಟ್ಟಿಕೊಂಡು ಬಿಟ್ಟಿದ್ದಾರೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ಕಂದಾಯ ಸಚಿವರಿಗೆ ತಿಳಿಸಿ ಕ್ರಮ ಕೈಗೊಳ್ಳುತ್ತೇನೆಂದು ಹೇಳಿದ್ದಾರೆ. ನೋಡೋಣ.

ಶ್ರೀ ಎಂ.ಪಿ. ಕುಮಾರಸ್ವಾಮಿ: ಸಂಬಂಧಪಟ್ಟ ಸಚಿವರಿಂದ ಮಾಹಿತಿ ಕೊಡಿಸುತ್ತೇನೆಂದು ಹೇಳಿದ್ದಾರೆ, ನಮಗೆ ಇದನ್ನು ಪರಿಹರಿಸಿ ಕೊಡಬೇಕು.

ಅಧ್ಯಕ್ಷರು: ಪರಿಹಾರ ಮಾಡಬೇಕೆಂದು ಸೂಚನೆಯನ್ನು ಕೊಡುತ್ತೇನೆ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ಇದು ಶೂನ್ಯವೇಳೆ, ಇದರ ವ್ಯಾಪ್ತಿಯನ್ನು ಅವರು ಅರ್ಥ ಮಾಡಿಕೊಳ್ಳಬೇಕು. ಇವತ್ತು ಅವರು ಕೊಟ್ಟಿದ್ದಾರೆ ವಿವರವನ್ನು ತರಿಸಿಕೊಂಡು ಉತ್ತರವನ್ನು ಕೊಡುತ್ತಾರೆ.

ಅಧ್ಯಕ್ಷರು: ಆಯಿತು.

ಇ) ವಿಷಯ: ತುರುವೇಕೆರೆ ತಾಲ್ಲೂಕಿನಲ್ಲಿ ಸಂಪೂರ್ಣ ರಸ್ತೆ ಹಾಳಾಗಿ ಖಾಸಗಿ ಮತ್ತು ಸರ್ಕಾರಿ ಬಸ್ಸಿನ ಮಧ್ಯೆ ಅಪಘಾತವಾಗಿ ಸುಮಾರು 4 ಜನ ಸ್ಥಳದಲ್ಲಿಯೇ ಸತ್ತಿರುವ ಬಗ್ಗೆ.

ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ): ಮಾನ್ಯ ಅಧ್ಯಕ್ಷರೆ, ತುರುವೇಕೆರೆ ತಾಲ್ಲೂಕಿನಲ್ಲಿ ಖಾಸಗಿ ಮತ್ತು ಸರ್ಕಾರಿ ಬಸ್ಸಿನ ಮಧ್ಯೆ accident ಆಗಿ ಸುಮಾರು 4 ಜನ ಸ್ಥಳದಲ್ಲಿಯೇ ಸತ್ತಿದ್ದಾರೆ. ಇನ್ನು 6 ಜನ Hospital ಗೆ ಸೇರಿಕೊಂಡಿದ್ದಾರೆ. ಅವರ ಪರಿಸ್ಥಿತಿ ಕೂಡ ತೀವ್ರ ಗಂಭೀರವಾಗಿದೆ. ಕಾರಣವೇನೆಂದರೆ, ಹೆಚ್ಚು ಮಳೆಯಾಗಿ ಸಂಪೂರ್ಣ ರಸ್ತೆ ಹಾಳಾಗಿರುವುದರಿಂದ ಇಂತಹ accident ಗಳು ನಿರಂತರವಾಗಿ ನಡೆಯುತ್ತಿವೆ. ಹಾಗಾಗಿ ನಿನ್ನೆ ಕೂಡ ನಾನು ನಮ್ಮ ಜಿಲ್ಲಾ ಉಸ್ತುವಾರಿ ಸಚಿವರ ಮುಂದೆ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ವಿಶೇಷವಾಗಿ ಈ ರಸ್ತೆ ರಿಪೇರಿ ಆಗದಿದ್ದರೆ ಹೆಚ್ಚು ಹೆಚ್ಚು accident ಆಗಿ ಜನ ಸಾಯುವ ಸ್ಥಿತಿಯಲ್ಲಿದ್ದಾರೆ. ಈಗಾಗಲೇ ಬಹಳಷ್ಟು ಜನ ಭಾರತೀಯ ಜನತಾ ಪಕ್ಷದ ಕಾರ್ಯಕರ್ತರು ನಿರಂತರವಾಗಿ strike ಮಾಡುತ್ತಿದ್ದಾರೆ. ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು strike ಮಾಡುತ್ತಿದ್ದಾರೆ. ರಸ್ತೆ ಹಾಳಾಗಿರುತ್ತದೆ. ಈಗಾಗಲೇ ಸತ್ತವರಿಗೆ KSRTC ಯವರು 50,000 ಸಾವಿರ